**C.C.272/2020 P.W.1**

ದಿನಾಂಕಃ **17.09.2021** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಆರೋಪಿಯ ಪರ ಮಾನ್ಯ ಶ್ರೀ **VG** ವಕೀಲರಿಂದಃ

ನಾನು ಕಟಿಂಗ್ ಶಾಪ್ ನಲ್ಲಿ ಕೆಲಸ ಮಾಡುತ್ತೇನೆ. ನನ್ನ ಹೆಸರಿನಲ್ಲಿ SBI ನ.ರಾ. ಪುರ ಮತ್ತು DCC ಬ್ಯಾಂಕ್ ನ.ರಾ. ಪುರದಲ್ಲಿ ಎರಡು ಬ್ಯಾಂಕ್ ಖಾತೆಗಳು ಇವೆ. ನನ್ನ ಸೆಲೂನ್ ಶಾಪ್ ಅಂಗಡಿ ಶೆಟ್ಟಿಕೊಪ್ಪದಲ್ಲಿ ಇರುತ್ತದೆ. ನಾನು 4 ನೇ ತರಗತಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ, ಇಂಗ್ಲೀಷ್ ಓದಲು ಬರೆಯಲು ಬರುತ್ತದೆ. ನಾನು ಮಾಡುವ ಎಲ್ಲಾ ವ್ಯವಹಾರಗಳ ಲೆಕ್ಕಗಳನ್ನು ಬರೆಯುವಾಗ್ಯೆ ನಾನು ವ್ಯವಹಾರವನ್ನು ಮಾಡದ ಕಾರಣ ನನಗೆ ಬರೆಯುವ ಅಭ್ಯಾಸ ಇರುವುದಿಲ್ಲ. ನನ್ನ ಅಂಗಡಿಯಿಂದ ದಿವಸಕ್ಕೆ 700/- ರಿಂದ 800/- ರೂ. ಸಂಪಾದನೆ ಬರುತ್ತದೆ. ನನ್ನ ಬ್ಯಾಂಕ್ ಖಾತೆಯಲ್ಲಿ ನಾನು ಒಂದು ಲಕ್ಷ ರೂ. ವ್ಯವಹಾರಗಳನ್ನು ಮಾಡುತ್ತೇನೆ. ನಾನು BPL ಕಾರ್ಡ್ ದಾರ ಎಂದರೆ ಸರಿ. 25.03.2020 ರಿಂದ Lockdown ಘೋಷಣೆಯಾಗಿ ಯಾವುದೇ ಕೆಲಸಗಳು ನಡೆಯುತ್ತಿರಲಿಲ್ಲ ಎಂದರೆ ಸರಿ. ನಿಪಿ- 1 ರಲ್ಲಿ ನಮೂದಿಸಿರುವ ಮೊತ್ತ ನನಗೆ ದೊಡ್ಡದಾಗ ಮೊತ್ತ ಎಂದರೆ ಸರಿಯಲ್ಲ. ನಾಗಶ್ರೀ ಹೋಟೇಲ್ ನ ಸೈಟು ಮಾರಾಟ ಮಾಡಿ ಸ್ವಲ್ಪ ಹಣವನ್ನು ನನ್ನ ಮಕ್ಕಳಿಗೆ ಕೊಟ್ಟು ಉಳಿದ ನನ್ನ ಬಳಿ ಇದ್ದು ಆ ಪೈಕಿ ಆರೋಪಿಗೆ ನಾನು 60,000/- ರೂ. ಗಳನ್ನು ನೀಡಿರುತ್ತೇನೆ. ಆ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಮಾಡಬಹು ಎಂದರೆ ಸಾಕ್ಷಿ 15 ವರ್ಷಗಳಾದ ಕಾರಣ ಆ ಬಗ್ಗೆ ದಾಖಲೆ ನನ್ನ ಬಳಿ ಇರುವುದಿಲ್ಲ.

ಆರೋಪಿಗೆ ಹಣವನ್ನು ನೀಡಿದಾಗ ನಿಪಿ-1 ನ್ನು ಬಿಟ್ಟರೆ ಬೇರೆ ದಾಖಲೆ ಮೇಲೆ ಬರವಣಿಗೆ ಮಾಡಿಕೊಟ್ಟಿರುವುದಿಲ್ಲ. ಆರೋಪಿ ನನ್ನ ಅಂಗಡಿಗೆ ಹೇರ್ ಕಟಿಂಗ್ ಮಾಡಿಸಲು ಬರುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಹೇರ್ ಕಟಿಂಗ್ ಗೆ ಬಂದಂತಹ ವ್ಯಕ್ತಿ ಶರ್ಟ್ ಮೇಲೆ ಕೂದಲು ಬಿದ್ದ ಕಾರಣ ಷರ್ಟನ್ನು ಕೊಡವುತ್ತಾರೆ ಎಂದರೆ ಸರಿ. ಆರೋಪಿ ನನ್ನ ಅಂಗಡಿಗೆ 2 ವರ್ಷಗಳ ಹಿಂದೆ ಕಟಿಂಗ್ ಗೆ ಬಂದಿದ್ದು ನನ್ನ ಅಂಗಡಿಯಲ್ಲಿ ಒಂದು ಕವರನ್ನು ಬಿಟ್ಟು ಹೋಗಿ ಮತ್ತೆ ಬಂದು ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯ ಮನೆ ಶೆಟ್ಟಿಕೊಪ್ಪದ ಭದ್ರಾವತಿ ಕಾಲೋನಿಯಲ್ಲಿ ಇದ್ದು ಅದರ ಅಕ್ಕಪಕ್ಕ ಮನೆಗಳು ಇರುತ್ತವೆ ಎಂದರೆ ಸರಿ. Lockdown ಸಮಯದಲ್ಲಿ ನಾನು ನನ್ನ ಅಂಗಡಿಯ ಬಾಗಿಲನ್ನು ತೆಗೆದಿರುವುದಿಲ್ಲ. ನನಗೆ ಕಣ್ಣು ಸರಿಯಾಗಿ ಕಾಣುತ್ತದೆ ಎಂದರೆ ಸರಿ. ಸಾಕ್ಷಿಗೆ ಭಾವಚಿತ್ರವನ್ನು ತೋರಿಸಿ ಸದರಿ ಭಾವಚಿತ್ರದಲ್ಲಿ ಕಾಣಿಸುತ್ತಿರುವ ಮನೆ ಮತ್ತು ಮನೆಯ ಮುಂದೆ ನಿಂತಿರುವ ವ್ಯಕ್ತಿ ಆರೋಪಿಯೇ ಎಂದು ಕೇಳಿದ್ದು ಸಾಕ್ಷಿ ಹೌದು

ಎಂದು ಒಪ್ಪಿದ್ದರಿಂದ ಸದರಿ ಭಾವಚಿತ್ರವನ್ನು ನಿಪಿ-1 ಎಂದು ಗುರುತಿಸಲಾಯಿತು. ಕೋವಿಡ್ ನಿಯಮಾವಳಿಗಳನ್ನು ಯಾವುದೇ ವ್ಯಕ್ತಿ ಉಲ್ಲಂಘನೆ ಮಾಡಿದ್ದರೆ ಅಂತಹ ವ್ಯಕ್ತಿ ಮೇಲೆ ಸಂಬಧಪಟ್ಟ ಇಲಾಖೆಯವರು ನಿಗಾ ವಹಿಸುತ್ತಿದ್ದರು ಎಂದರೆ ಸರಿ. ನಾನು ಶೆಟ್ಟಿಕೊಪ್ಪದಲ್ಲಿ 10 ವರ್ಷಗಳಿಂದ ವಾಸವಾಗಿರುತ್ತೇನೆ. ನಿಡಿ-1 ರಲ್ಲಿ ಬಲಭಾಗದಲ್ಲಿ ಕಾಣುಸುತ್ತಿರುವ ವ್ಯಕ್ತಿ ಕಡಹಿನಬೈಲಿನ ಗ್ರಾಮ ಪಂಚಾಯಿತಿಯ PDO ಎಂದರೆ ಸರಿ. ನಿಪಿ-5 ರಲ್ಲಿ ಇರುವ ಸಹಿಗೂ ನಿಪಿ-1 ರ ಮೇಲೆ ಇರುವ ಸಹಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿಪಿ-1 ಎ ಆರೋಪಿಯ ಸಹಿ ಅಲ್ಲ ಎಂದರೆ ಸರಿಯಲ್ಲ. ನನ್ನ ಅಂಗಡಿಗೆ ಕಟಿಂಗ್ ಮಾಡಿಸಲು ಆರೋಪಿ ಬಂದಿದ್ದು ಆಗ ಸಹಿ ಮಾಡದೇ ಇರುವ ಖಾಲಿ ಚಕ್ಕನ್ನು ನನ್ನ ಅಂಗಡಿಯಲ್ಲಿ ಬೀಳಿಸಿಕೊಂಡು ಹೋಗಿದ್ದು ಅದನ್ನು ನಾನು ದುರುಪಯೋಗ ಪಡಿಸಿಕೊಂಡು ಸಹಿಯನ್ನು ಮಾಡಿ ಈ ಸುಳ್ಳು ಕೇಸನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. 01.05.2020 ರಂದು Lockdown ಇದ್ದು ಆರೋಪಿ ಊರಿನಲ್ಲಿಯೇ ಇರಲಿಲ್ಲ ಎಂದರೆ ಸರಿಯಲ್ಲ. ದಿಃ 15.06.2020 ರಂದು ಆರೋಪಿಯು ಕ್ಯಾರಂಟೈನ್ ನಲ್ಲಿ ಇದ್ದರು ಎಂದರೆ ಸರಿಯಲ್ಲ. ನಿಪಿ-3 ಕ್ಕೆ ನಾನೇ ಮಾಹಿತಿಯನ್ನು ವಕೀಲರಿಗೆ ನೀಡಿರುತ್ತೇನೆ. ನಿಪಿ-3 ಆರೋಪಿಗೆ ನಿಗದಿತ ದಿನಾಂಕದಂದೇ ಜಾರಿಯಾಗಿರುವ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಸಮನ್ಸ್ ನೀಡಿದ ನಂತರ ಆರೋಪಿಗೆ ನಿಪಿ-3 ರ ನೋಟೀಸ್ ಜಾರಿಯಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯಿಂದ ಅಕ್ರಮ ಲಾಭ ಪಡೆಯುವ ಸಲುವಾಗಿ ನಾನು ಸುಳ್ಳು ಕೇಸು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ಅನ್ನು ನೀಡಿದ ಸಮಯದಲ್ಲಿ ಆರೋಪಿ ಕ್ಯಾರೆಂಟೈನ್ ನಲ್ಲಿದ್ದು ಅವರ ಮನೆ ಬಳಿ ಯಾರೂ ಹೋಗುವ ಹಾಗೆ ಇರಲಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಶ ಕೋರಿದ್ದು, ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

Sd/-

ಸಾಕ್ಷಿ ಸಹಿಃ

ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರ
ನ ರಾ ಪುರ.